Reg No B G 155 24—6—72

55th Year of Publication ‘Satyavadi’ daily, Mysore 4

Doc-499
T-P-2

the State – The First
Golden Jubilee
Celebrated Paper
★
News, Views, Dharmic
Moral, Ethical Matters



ರಾಷ್ಟ್ರಪತಿ ಪ್ರಥಮ
ಸ್ವರ್ಣ
ಮಹೋತ್ಸವ
ವರದೇರಿಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಭಾರತದಿಂದ ಪರಮಾಣು ಪ್ರಯೋಗ

ರಸಾಯನಿಕ ಗೊಬ್ಬರದಿಂದ

ಕಿಬ್ರ್ದರೋಗ

ಈ ಹಿಂದೆಯೇ ಅಂದರೆ ಮೇ ತಿಂಗಳ ಸಂಚಿಕೆಯಲ್ಲಿ ‘ಗೋಮ್ಮಯದಲ್ಲಿ ಲಕ್ಷ್ಮೀ ನಿವಾಸ” ಎಂಬ ಲೇಖನದಲ್ಲಿ ರಸಾಯನಿಕ ಗೊಬ್ಬರಗಳಿಂದ ಪೈರು ಪಚ್ಚೆಗಳಿಗೆ ರೋಗ ಬರುತ್ತದೆ ಹಾಗೂ ಮಣ್ಣು ತನ್ನ ಸತ್ವ ಕಳೆದುಕೊಳ್ಳುತ್ತದೆ ಎಂದು ಪ್ರಕಟಿಸಿರುತ್ತೆ : ಇದು ವಿಜ್ಞಾನಿಗಳ ವರದಿಯೇ ಆಗಿದೆ. ಆದರೆ ರಸಾಯನಿಕ ಗೊಬ್ಬರದ ಉಪಯೋಗದಿಂದ ಆಗುವ ಅನರ್ಥ ಇಷ್ಟು ಮಾತ್ರವಲ್ಲ ‘ರಸಾಯನಿಕ ಗೊಬ್ಬರ ಗಳಿಂದ ಬೆಳೆದ ಆಹಾರಗಳಿಂದ ಅರ್ಬುದ ರೋಗವು ಬರಬಹುದೆಂದು ವಿಶ್ವಸಂಸ್ಥೆಯ ಆಹಾರ ನಿಭಾಗದ ವಿಜ್ಞಾನಿಗಳು ವರದಿ ಮಾಡಿರುತ್ತಾರೆ’ ಎಂದು 5-6-72 ರ ಸೋಮವಾರ ಸಂಜೆ 7-35 ರ ಕನ್ನಡ ವಾರ್ತಾ ಪ್ರಸಾರದಲ್ಲಿ ಕೇಳಿದೆವು. ಪ್ರಕೃತಿಗೆ ವಿರೋಧವಾಗಿ ಹೋದರೆ ವಿಕೃತಿಯೇ ಆಗುವುದೆಂದು ಇಂದು ಸ್ಪಷ್ಟವಾಯಿತು ಅಂದರೆ ಹಿಂದೆ ಪ್ರಕೃತಿ ನಿಯಮದಂತೆ ಪ್ರಾಣಿಗಳ ಗೊಬ್ಬರದಿಂದ ಅದರಲ್ಲೂ ಹಸುವಿನ ಗೊಬ್ಬರದಿಂದ ಮತ್ತು ಕೊಳೆತ ಸೊಪ್ಪುಗಳ ಗೊಬ್ಬರದಿಂದ ಬೆಳೆದ ಆಹಾರ ವನ್ನು ಉಪಯೋಗಿಸುತ್ತಿದ್ದರು ಆಗ ಭೂಮಿಯು ಸತ್ವಹೀನವಾಗುವುದರ ಬದಲು ಸತ್ವಯುತವಾಗುತ್ತಿತ್ತು ; ಹಾಗೂ ಇಂತಹ ರೋಗಗಳು ಇವರ ಮೂಲಕ ಹಬ್ಬುತ್ತಿರಲೇ ಇಲ್ಲ.

ಕಾಲಕ್ರಮೇಣ ಗೋಹತ್ಯೆ ಹೆಚ್ಚಾದ, ತೆ ಹಸುವಿನ ಗೊಬ್ಬರ ದೊರೆಯದಾಯಿತು ; ದೊ ತರೂ ಅಲ್ಪ ಪ್ರಮಾಣ ವೆ. ಇವುಂದ ಘನ ಸರಕಾರದವರು ಗೋಹತ್ಯೆ ನಿಲ್ಲಿಸುವದರ ಬದಲು ರಸಾಯನಿಕ ಗೊಬ್ಬರಗಳ ತಯಾರಿಕೆಗಾಗಿ ಕಾರ್ಖಾನೆಗಳನ್ನು ಸ್ಥಾಪಿಸಿದರಲ್ಲವೆ. ವಿದೇಶಗಳಿಂದ ಗೊಬ್ಬರ ವನ್ನು ಆಮದು ಮಾಡಿಕೊಳ್ಳುವುದಕ್ಕಾಗಿ “ಶ್ರೀಸಾಮಾನ್ಯನ” ಅಪಾರ ಹಣ ವ್ಯಯ ಮಾಡಿದ್ದಾರೆ. ಇದು ಗೋಹತ್ಯೆಯಿಂದ ಅಪಾರ ಪಾಪ ಹೊಂದಿದುದು ಮಾತ್ರವಲ್ಲ ಅಷ್ಟು ಹಣ ವ್ಯಯ ಮಾಡಿ ‘ಅರ್ಬುದ ರೋಗವನ್ನು ಕೊಂಡು ಶ್ರೀಸಾಮಾನ್ಯನಿಗೆ ಉದಾರವಾಗಿ ನೀಡಿದ್ದಾರೆ’ ಎಂದರೆ ಅಪ್ಪ ರಶಃ ತಪ್ಪಾಗಲಾರದು. ಕೇವಲ ತಮ್ಮ ಪಟ್ಟಭದ್ರ ಹಿತಕ್ಕಾಗಿ, ಸ್ವಾರ್ಥಕ್ಕಾಗಿ, ಕೆಲವರಿಂದ ಮತ ಗಳಿಸುವ ಸಲುವಾಗಿ ಹಿಂದೂಧರ್ಮದ ಸಂಕೇತ ಹಾಗೂ ಜೀವತೆಯಾದ ಗೋವಿನ ವಧೆಯನ್ನು ಪ್ರೋತ್ಸಾಹಿಸುತ್ತಿರುವದು ಅತೀ ದುಃಖಕರವಾದ ಸಂಗತಿಯಾಗಿದೆ.

ದಿನೇದಿನೇ ಕ್ಷೀಣಿಸುತ್ತಿರುವ ಗೋ ಸಂಪತ್ತನ್ನು (ಸಂತತಿಯನ್ನು) ಈಗಲಾದರೂ ಘನ ಸರ್ಕಾರದವರು ಗೋವಧೆ ನಿಷೇಧಿಸುವುದರ ಮೂಲಕ ತಡೆಯುತ್ತಾರೆಂದು ಆಶಿಸೋಣವೆ ?

ಗೋಮಾತೆಯ ಉಪಯೋಗ ಕೇವಲ ಹಾಲಿಗಾಗಲೀ, ಗೊಬ್ಬರಕ್ಕಾಗಿಯಾಗಲೀ ಹಿಂಸೆಗಳಿಂದ ಪೂಜೆ ಸ್ವೀಕರಿಸುವುದ ಕ್ಕಾಗಿಯಾಗಲೀ ಮಾತ್ರವಲ್ಲ. ಔಷಧ ಕ್ಕಾಗಿಯೂ ಅದರ ಉಪಯೋಗವಿದೆಯೆಂ ದರೆ ಆಶ್ಚರ್ಯವಾಗಬಹುದು : ಆದಕ್ಕೆ ಅದು ವಾಸ್ತವ ಸಂಗತಿಯಾಗಿದೆ. ಮಕ್ಕಳಿಗೆ ಲಿವರ್ ಖಾಯಿಲೆ ಬರುವದು ತಿಳಿದಿದೆ ಯಷ್ಟೆ. ಖಾಯಿಲೆ ಪ್ರಾರಂಭವಾಗುತ್ತಿರುವಾಗಲೇ ಬೆಳಿಗ್ಗೆಯ ವೇಳೆಯಲ್ಲಿ ಆಗ ತಾನೇ ಬೀಳುವ ಹಸುವಿನ ಗಂಜಳವನ್ನು (ಒಂದು ಒಳಲೆಯಷ್ಟು) ಏಳು ಬಾರಿ ಶೋಧಿಸಿ (ಒಂದು ಶುಭ್ರವಾದ ಬಿಳೀ ಬಟ್ಟೆಯಿಂದ) ಮಕ್ಕಳಿಗೆ ಪಾನಮಾಡಿಸಿದರೆ ಮೂರು ದಿನಗಳಲ್ಲಿಯೇ ಆ ಖಾಯಿಲೆಯು ಹೆಸರಿಲ್ಲದಂತಾಗುತ್ತದೆ. ದೊಡ್ಡವರಿಗೆ ಯಕೃತ್ತಿನಲ್ಲಿ ತೊಂದರೆ ಹಾಗೂ ಮೂತ್ರ ದಲ್ಲಿ ಕಲ್ಲು ಬೀಳುತ್ತಿದ್ದಾಗಲೂ ಇದನ್ನು (ಗಂಜಳವನ್ನು) ಪಾನಮಾಡಿದರೆ ತಾನೇ ತಾನಾಗಿ ನಿವಾರಣೆಯಾಗುತ್ತದೆ : ಔಷಧ ಕೀತಿಯಲ್ಲಿ ಇದರ ಉಪಯೋಗ ಇನ್ನೂ ಇದೆ.

ಬೀಡಿ ಕೈಗಾರಿಕೆ ಬಗ್ಗೆ
ಕಾರ್ಮಿಕ ಮಂತ್ರಿಗಳ ಸಮ್ಮೇಳನ

ಮೈಸೂರು— ಮೇಲ್ಕಂಡ ಸಮ್ಮೇಳನವನ್ನು ಉದ್ಘಾಟಿಸುತ್ತಾ, ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ನವರು, ಪೂರ್ಣ ಪ್ರಮಾಣದ ಬೀಡಿ ಉದ್ಯಮದ ಸಮಸ್ಯೆಗಳು ಈಗ ಅಂತರ ರಾಜ್ಯ ರೂಪುತಾಳಿದೆ, ವಿವಿಧ ರಾಜ್ಯ ಸರಕಾರಗಳು ಬೇರೆಬೇರೆ ಕೂಲಿ ದರ ನಿಗದಿ ಮಾಡುವುದರಿಂದ ಈ ಉದ್ಯಮ ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ವಲಸೆಹೋಗುವ ಸಮಸ್ಯೆಗೆ ಅಂತರ ರಾಜ್ಯ ಮಟ್ಟದಲ್ಲಿ ಪರಿಹಾರವನ್ನು ಕಂಡುಹಿಡಿಯಬೇಕಾಗಿದೆ, ಎಂದು ಹೇಳಿದರು; ಕನಿಷ್ಠ ಕೂಲಿ ದರ ನಿರ್ಧರಿಸಲು ಪೂರಕವಾಗಿರುವ ಸಮಿತಿಯನ್ನು ಬಲಗೊಳಿಸಬೇಕೆಂದೂ, ಪ್ರಾವಿಡೆಂಟು ಫಂಡು ಮತ್ತು ಇ.ಎಸ್.ಐ ಯೋಜನೆಗಳ ವಿಸ್ತರಣೆಯನ್ನು ಪರಿಶೀಲಿಸಬಹುದೆಂದೂ ಹೇಳಿದರು.

★ ಲಾಟರಿ ಯೋಜನೆಯನ್ನು ಸಧ್ಯಃ ನಿಲ್ಲಿಸುವ ಯೋಚನೆ ಇಲ್ಲವೆಂದು ವಿಧಾನ ಪರಿಷತ್ತಿನಲ್ಲಿ ತಿಳಿಸಲಾಯಿತು.

ಈಗ ನಾವು ವಿವೇಚಿಸಬೇಕಾಗಿದೆ– ಪೋಷಣೆಯಲ್ಲಿ ತಾಯಿ, ಚಿಕಿತ್ಸೆಯಲ್ಲಿ ವೈದ್ಯ, ಪೂಜಾ ಸಮಯದಲ್ಲಿ ಜೀವತೆ, ದುಡಿಯುವಾಗ ಕರ್ಮಯೋಗಿ, ಇಷ್ಟೆಲ್ಲ ಗುಣಗಳಿಂದ ಕೂಡಿದ ಗೋವಿನ ವಧೆಯು ನ್ಯಾಯವೆ, ನ್ಯಾಯಬಾಹಿರವೆ ? ಇನ್ನೂ ಇದೇರೀತಿ ಗೋಹತ್ಯೆ ನಡೆಯುತ್ತಿದ್ದ ಪಕ್ಷದಲ್ಲಿ, ಧರ್ಮನಾಶ ಮಾತ್ರವಲ್ಲ, ಸರಕಾರದ ವಿನಾಶದೊಂದಿಗೆ ದೇಶವೂ ವಿನಾಶದ ಹಾದಿ ಹಿಡಿಯುತ್ತದೆ. ಆದುದರಿಂದ ಈ ಸಮಯದಲ್ಲಾದರೂ ಎಚ್ಚೆತ್ತು, ಗೋಹತ್ಯೆ ನಿಷೇಧಿಸಲು ಸರಕಾರದವರು ಕೂಡಲೇ ಕ್ರಮಕೈಗೊಳ್ಳುವರೆಂದು ಭಾವಿಸುತ್ತೇನೆ.

— ಅನಂತಕೃಷ್ಣ ಜೋಯಿಸ್

ಭಾರತದಿಂದ ಪರಮಾಣು ಪ್ರಯೋಗ

ಟೋಕಿಯೋ— ಭಾರತವು ಭೂಗರ್ಭದಲ್ಲಿ 20 ಕಿಲೋಟನ್ ಪರಮಾಣು ಪ್ರಯೋಗ ನಡೆಸಲು ಯೋಚಿಸಿದೆ ಎಂದು ಆ ನಾ ಸಿ ಸಿಂರ್ಬಾ ಪತ್ರಿಕೆ ಪ್ರಕಟಿಸಿದೆ.

★

ಇಬ್ಬರ ಜಗಳ ಮೂರನೆಯವನಿಗೆ ಲಾಭ

ಪಂಜಿಂ— ಮೈಸೂರು–ಮಹಾರಾಷ್ಟ್ರ ಗಡಿಯ ಖಾನಾಪುರದ ಭಾಗಗಳನ್ನು ಗೋವಾಕ್ಕೆ ಸೇರಿಸಿ ವಿಶಾಲ ಗೋವಾ ಮಾಡುವಂತೆ ಸಮಾಜವಾದಿ ನಾಯಕ ಶ್ರೀ ಪೀಟರ್ ಆಲ್ವಾರಿಸ್ ಮಾದಿಸಿರುವರು.

★

140 ವರ್ಷ ವಯಸ್ಸು

ನಾಗರಕೊಯಿಲ್— ತಮಿಳುನಾಡುವಿನಲ್ಲಿ ಅತಿ ಹೆಚ್ಚು ವಯಸ್ಸಿನವರೆಂದು ಹೇಳಲಾದ ಶ್ರೀ ನಾರಾಯಣ ಪೋಟಿ, ತನ್ನ 104 ನೇ ವರ್ಷದಲ್ಲಿ ಕೇರಳಪುರಂನಲ್ಲಿ ಸ್ವರ್ಗಸ್ಥರಾದರು.

★

80 ಮಂದಿ ನಿಯೋಗ

ಸಿಮ್ಲಾ— ಶೃಂಗಸಭೆಗೆ ಭುಟ್ಟೋ ಜೊತೆಯಲ್ಲಿ 80 ಮಂದಿ ನಿಯೋಗ ಬರುವುದೆಂದು ಪ್ರಕಟವಾಗಿದೆ.

★

ಸರಕಾರಕ್ಕೆ ಸಹಕರಿಸಿ

ಗುಲ್ಬರ್ಗ— ಯೋಜನೆ ಮತ್ತು ವಾರ್ತಾ ಸ್ಟೇಟ್ ಮಂತ್ರಿ ಶ್ರೀ ದೇವೇಂದ್ರಪ್ಪನವರು, ಬಡತನ ಮತ್ತು ನಿರುದ್ಯೋಗ ಸಮಸ್ಯೆ ಪರಿಹಾರಕ್ಕೆ ಜನರು ಸರಕಾರದೊಡನೆ ಸಹಕರಿಸಿ ಬೆಂಬಲ ನೀಡಬೇಕೆಂದು ಕರೆಯಿತ್ತರು.

● ಪ್ಯಾಗ್ನ ಕೋನೋಪಿಸ್ಟೆಲ್ ಪುರ್ಗಪ ಆಡಳಿತಗಾರರು ಭಾರತ ಪ್ರಧಾನಿ ಇಂದಿರಾರವರಿಗೆ ಒಂದು ಖಡ್ಗವನ್ನು ಪಾರಿತೋಷಕವಾಗಿತ್ತರು.

ಇಂದಿರಾ ವಾಣಿ

★

ಭಾರತಾದ್ಯಂತ ಕಾಣುವ ಶಿಲಾಶಾಸನಗಳು 22 ಶತಮಾನಗಳ ಹಿಂದಿದ್ದ ಅಶೋಕ ಚಕ್ರವರ್ತಿಯ ಆಡಳಿತ ಸಾಕ್ಷಿಯಾಗಿವೆ. ಪ್ರಜಾರಕ್ಷಣೆ ಮಾಡಿ, ಪ್ರಾಣಿ ಹಾಗೂ ವನ್ಯ ಸಂಪತ್ತನ್ನು ಕಾಪಾಡಿ, ದುಷ್ಟರನ್ನು ಶಿಕ್ಷಿಸುವುದು ದೊರೆಯ ಕರ್ತವ್ಯ ವೆಂದು ಅಶೋಕ ಚಕ್ರವರ್ತಿ ನುಡಿದಿದ್ದನು. ಬಹುಶಃ ಇತ್ತೀಚಿನವರೆಗೆ ಅಶೋಕ ಒಬ್ಬನೇ ಪ್ರಾಣಿಗಳನ್ನು ಮಾನವನ ಆಹಾರಕ್ಕಾಗಿ ಕೊಲ್ಲುವುದನ್ನು ನಿಷೇಧಿಸಿದ ಏಕ ಮೇವ ಚಕ್ರವರ್ತಿಯಾಗಿದ್ದನು.

ಭಾರತದ ಮಿತ್ರರೂ, ಬ್ರಿಟಿಷ್ ಲೇಖಕರೂ ಆದ ಎಡ್ವರ್ಡ್ ಥಾಂಪ್ಸನ್‌ರವರು ಒಮ್ಮೆ ಗಾಂಧೀಜಿಯವರೊಡನೆ ಮಾತನಾಡುತ್ತಾ ತೀವ್ರಗತಿಯಲ್ಲಿ ವನ್ಯ ಪ್ರಾಣಿ ಸಂಪತ್ತು ನಾಶವಾಗುತ್ತಿರುವ ಬಗ್ಗೆ ವಿಷಾದಿಸಿದರು. ಆಗ ಮಹಾತ್ಮರು "ವನ್ಯ ಪ್ರಾಣಿ ಸಂಪತ್ತು ಅರಣ್ಯದಲ್ಲಿ ಕಡಮೆಯಾಗಿ, ನಗರಗಳಲ್ಲಿ ಹೆಚ್ಚುತ್ತಿದೆ!" ಎಂದು ನುಡಿದರು.

ಸರ್ವ ಸೃಷ್ಟಿಯನ್ನೂ, ಸಹಜೀವಿಗಳನ್ನೂ ಸ್ನೇಹದ ದೃಷ್ಟಿಯಿಂದ ನೋಡಲಾಗದವರನ್ನು ನಿಜವಾಗಿಯೂ ಮಾನವೀಯ ಹಾಗೂ ನಾಗರಿಕ ವ್ಯಕ್ತಿಗಳೆಂದು ಕರೆಯಲು ಸಾಧ್ಯವಾಗುವುದಿಲ್ಲ.

ದೇಶಗಳ ಪ್ರಗತಿಯೊಂದಿಗೆ ಪ್ರಕೃತಿ ಸಂಪತ್ತಿನ ವಿನಾಶ ಸೇರುವುದು ಅತ್ಯಂತ ವಿಷಾದನೀಯ.

'ಮಾನವನು ಕೀಳು ಸೃಷ್ಟಿಯ ಧಣಿ, ಶ್ರಿಷ್ಠನೆನ್ನುವುದು ಸೊಕ್ಕಿನ' ಕಲ್ಪನೆ' ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ

— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ಕವರ ಜೊಚ್ಚಲು ಚಿತ್ರ

ಅನೆ - ಹುಡುಗ

SHAKTI

SUDHA

A Superb Tonic

ಈಗಿನ ಭಾರತದಲ್ಲಿ ಕೂಡಲೇ

ಗೋವಧೆ ನಿಷೇಧವಾಗಲಿ

ವುಡ್‌ಲ್ಯಾಂಡ್ಸ್ 23-6-72ರಿಂದ ಅಮೋಘ 8ನೇ ವಾರ

.... ಚಿತ್ರಕರ್ಷ ಕನ್ನಡ ಚಿತ್ರ ....

ಹೃದಯ ಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಪಂಡರಿಬಾಯಿ

ನಿರ್ದೇಶನ: ರಾಜಶ್ರೀ ಸಹೋದರರು ನಿರ್ಮಾಪಕರು: ಎಂ ಜೆ ಎಂ ಸಹೋದರರು

ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಮಾಟ್ಟಿಕಾಣ ವೇಳೆ

ಅಪೆರಾ 23 6 72 ರಿಂದ

ಮನೋರಮಾತವರ ಮಹೋನ್ನತ ತಮಿಳು ಚಿತ್ರ

ಪೊನ್ ಮಗಳ್ ವಂದಾಳ್

ಪಾತ್ರ – ಜೈಶಂಕರ್, ಲಕ್ಷ್ಮಿ, ಮುತ್ತುರಾಮ್, ನಂಬಿಯಾರ್, ರಾಮಸ್ವಾಮಿ

ಸಂಗೀತ – ಶಂಕರ್ ಗಣೇಶ್ ದಿಗ್ದರ್ಶನ – ವಿಜಯನಾರಾಯಣ

Quality Printing Neat Binding

Lakshminarasimha Press

Sivarampet, Mysore

Contribute Liberally

to the National Defence Fund

Protect the Cow



Edited Printedand Published by Dharmapracharanirata-M S Krishna Rao (Propretor) at the Satyavadi Press Chamarajapuram Mysore 4

For Mosquito Nets in all sizes Visit Bank Road, Bahusar, Mysore